

ಅವನತ್ತ ಕಣ್ಣಿಕ್ಕಿ ಗಮನಿಸಿದೆ. ಕಟ್ಟೆಚ್ಚರದೊಡನೆ ಚಹರೆ–ಚರ್ಯೆಯನ್ನು ಅಳೆದೆ. ಹುಡುಗ, ನಾನು ಈ ಮೊದಲೆಣಿಸಿದ್ದಷ್ಟು ಮುಗುದನೆಂದನಿಸಲಿಲ್ಲ. ಇಷ್ಟಿದ್ದೂ ಹಾಲ್ದಿಂಗಳು ತೊಳೆದಂತಿದ್ದ ಅವನ ಚೆಲುವು ಚ್ಯುತವೆನಿಸಲಿಲ್ಲ. ಇಳಿಮುಡಿಯ ಜೊಂಪೆಯನ್ನು ಒತ್ತರಿಸಿ ಎತ್ತಿ ಕಟ್ಟಿದ್ದ. ಮೈಮೋರೆಯ ಭೂಕಂಪ ಮುಂದುವರೆದೇ ಇತ್ತು.

'ಧ್ರೂ...' ಇಡೀ ಕಾಲೇಜು ಈ ಹುಡುಗನನ್ನು ಕರೆಯುವುದೇ ಹೀಗೆ. ಹೆಸರು ಹೇಳುವಾಗ ಕನ್ನಡದಲ್ಲಿ ಬರೆಯುವ ಹಾಗೆ–ಅಚ್ಚುಕಟ್ಟಾಗಿ 'ಧ್ರುವ' ಎಂದು ಮಂದಿ ಉಚ್ಚರಿಸುವರೆಲ್ಲಿ? 'ಒಂದು ಹೇಳುತೀನಿ ಕೇಳು. ನಿನಗೆ ಸಾಕಷ್ಟು ಹೇಳೋದಿದೆ. ನನಗೆ ಸಾಕಷ್ಟು ಕೇಳೋದಿದೆ... ಆದರೇನು ಮಾಡೋದು? ಒಂದು ನೆನಪಿರಲಿ–ಕೇಳೋದನ್ನ ತನಿಖೆ ಅನ್ನುತಾರೆ. ಹೇಳೋದು ಮಾಹಿತಿ...' ಅಂತಂದೆ.

'ಹೌದು, ಸರ್... ಆದರೆ, ಹೇಗೆ ಸುರುಮಾಡೋದೂಂತ ಗೊತ್ತಾಗುತಿಲ್ಲ...' ಧ್ರುವ ನಾಲಗೆಯನ್ನು ತ್ರಾಸಿನಿಂದ ಹೊರಳಿಸಿದ. ಅವನ ಚಡಪಡಿಕೆ ಅರ್ಥವಾಗದಿರಲಿಲ್ಲ.

'ಬೆತ್ತಲಾಗುವವರೆಗೂ ಭಿಡೆ ಕಣೋ–ಹುಡುಗ... ಆದಮೇಲೆ ಜಗತ್ತು ಭಂಡ...'

'ಅಂದರೆ?'

'ನೋಡು–ಧ್ರೂ... ಹಾವು ಮುದ್ದಾಗಿದೇಂತ ಮುದ್ದಿಡೋಕಾಗುತ್ತೆಯೇನೋ?'

'....??'

'ಸರಿ, ನಾನೇ ಕೇಳುತೀನಿ. ಹೇಳು. ಯಾವೊಂದನೂ ಮುಚ್ಚಿಡದೆ ಹೇಳು... ನಾನು ಕೇಳಪಟ್ಟಿದ್ದೆಲ್ಲ ನಿಜವಾ?'

'ಯಾವುದು, ಸರ್?'

'ಎಲಿವೇಟರ್ ಡೋರಿನ ಮೇಲೆ ದಿನವೂ ಗ್ರಾಫಿಟೀ ಗೀಚೋದು ನೀನೇ ಹೌದಾ?'

'.....!!'

'ಮಾತೇ ಆಡದಿದ್ದ ಮೇಲೆ ನಿನ್ನೊಡನೇನು ಹೇಳು. ನನಗೆ ನೂರೆಂಟು ಕೆಲಸ ಇರುತ್ತೆ... ನಿನ್ನ ನನ್ನ ನಡುವೆ ಖಾಸಗಿಯಾಗಿ ಏನಿರೋಕೆ ಸಾಧ್ಯ?' ಎಂದು ಹೇಳಿ ಹೊರಡಲನುವಾದೆ.

'ಸರ್, ನಾನೂ ಶೋಷಣೆಗೊಳಪಟ್ಟಿದೀನಿ... ನನ್ನ ಮೇಲೂ ದೌರ್ಜನ್ಯವಾಗಿದೆ.' ಧ್ರುವನು ಕಟ್ಟಕಡೆಯಲ್ಲಿ ಬಾಯ್ದೆರೆದಿದ್ದೇ ನಾನು ದಂಗಾಗಿ ಹೋದೆ. 'ಹಾಗಂತ ನೀನು ಮಾಡಿರೋದು ಅಕ್ರಮವಲ್ಲವಾ, ಧ್ರೂ?' ಅಂತಂದು ನಿಂತಲ್ಲಿನಿಂದ ಕದಲಿದೆ.

'ಸರ್, ನಿಮಗೊಂದು ವಾಯ್ಸ್ ಮೆಸೇಜು ಕಳಿಸಿದೀನಿ. ಕೇಳಿಸಿಕೊಳ್ಳಿ ಪ್ಲೀಸ್...'

ಆ ಕೂಡಲೆ, ಕಿಸೆಯಲ್ಲಿನ ಫೋನು ತಡಕಿದೆ. ಇರಲಿಲ್ಲ. 'ಕಾರಲ್ಲೇ ಬಿಟ್ಟೇನೆನುಸುತ್ತೆ... ಎತ್ತಿಕೊಂಡು ಬರುತೀನಿ. ಇಲ್ಲೇ ಇರು ಆಯಿತಾ?' ಅಂತಂದು, ಕಾರಿನತ್ತ ಸರಿದು, ಮೊಬೈಲೆತ್ತಿಕೊಂಡು, ಅಲ್ಲಿಯೇ ಉಳಿದು ಧ್ರುವ ಕಳಿಸಿದ್ದ ಧ್ವನಿಸಂದೇಶವನ್ನು ಕೇಳಿಸಿಕೊಂಡೆ. 'ಧ್ರೂ ಡಾರ್ಲಿಂಗ್...' ಅದು ಪ್ರೇಕ್ಷಾ ಜಯಿಸ್ವಾಲಳ ಧ್ವನಿ. ಬಲು ಮಾದಕವಾಗಿತ್ತು. 'ನನ್ನದು ನಿನ್ನದು ನಮ್ಮಲ್ಲೇ ಇರಬೇಕು–ಆಯಿತಾ, ಸ್ವೀಟೀ? ಎಲ್ಲಿ–ಸೀಕ್ರೆಸಿ ಮೇಂಟೇನ್ ಮಾಡುತೀನೀಂತ ಪ್ರಾಮಿಸ್ ಮಾಡು. ಮಾಡಿದರೆ ನನ್ನ ತಲೆಕೊಟ್ಟು ನಿನ್ನನಿದರಿಂದ ಪಾರುಮಾಡುತೀನಿ... ಜಸ್ಟ್ ಪ್ರಾಮಿಸ್–ಅಷ್ಟೆ....' ಪದಪದವೂ ಲಲ್ಲೆಯಂತಿದ್ದ ಆ ಮೆಸೇಜಿನಲ್ಲೊಂದು ಉದ್ದಾನುದ್ದದ ಮೌನವಿತ್ತು. ಆದರೆ, ಹೇಳಿಕೆಯಿನ್ನೂ ಬಾಕಿಯುಂಟೆಂದು ಗೊತ್ತಾಗುತ್ತಿತ್ತು. ಆ ವಾಯ್ಸ್ ಮೆಸೇಜಿನಲ್ಲಿನ 'ಪ್ಲೇಸ್ಸೈಡು' ಕೆಲಗಳಿಗೆ ತನ್ನದೇ ಮೌನವನ್ನು ದಾಟಿ ಮುಂದುವರೆದಿತ್ತು. ನಾನು ನಿಂತಲ್ಲಿನಿಂದಲೇ ಕೆಫೆಯ ಮುಂಗಾಜಿನಾಚೆಯಿಂದ ನನ್ನನ್ನು ವಾರೆವಾರೆ ನೋಡುತ್ತಿದ್ದ ಧ್ರುವನತ್ತ ಒಮ್ಮೆ ಕಣ್ಣು ಹಾಯಿಸಿದೆ. ಹುಡುಗ ಅಮಾಯಕನಲ್ಲವೆಂದು ನನ್ನ ಮನಸ್ಸು ಒತ್ತಾಯಿಸಿ ಹೇಳುತ್ತಿರುವಾಗ ವಾಯ್ಸ್ ಮೆಸೇಜು ಮುಂದುವರೆಯಿತು. 'ಯಾರೇನೇ ಅಂದರೂ ನೀನು ನನಗೆ ಕ್ಯೂಟ್ ಲಿಟಲ್ ಸ್ನೇಕ್... ತಿಳೀತಾ? ನೀಡ್ಯು ಇಮ್ಮೆನ್ಸ್ಲೀ–ಡಾರ್ಲಿಂಗ್...' ಪ್ರೇಕ್ಷಾ ಲೊಚಲೊಚನೆಂದು ಈ ಮುದ್ದಾದ ಹಾವಿಗೆ ಮುತ್ತಿಟ್ಟ ಸದ್ದು ಕೇಳಿಸಿತು.

ತಕ್ಷಣ ಫೋನು ಬಡಿಚಿ ಕಿಸೆಗಿಳಿಸಿದೆ. ಆದರೆ, ಕೆಫೆಯೊಳಗೆ ವಾಪಸು ಹೋಗುವ ಪ್ರಮೇಯ ಕೈಕೊಳ್ಳಲಿಲ್ಲ. ●

